ಅಲ್ಲ, ಅದು ಜೀವದ ಪೂರ್ಣ ಸ್ವರೂಪವಲ್ಲ, ಈ ಅಪೇಕ್ಷೆಯಿಂದ ಅವೆಲ್ಲವು ಅಜೀವವಿವೆ. ವ್ಯವಹಾರೀ ಜೀವವು ಕೂಡ ವಾಸ್ತವಿಕ ಜೀವವಲ್ಲ, ಅಹಹ ! ವ್ಯವಹಾರ ಜೀವವಂತೂ ನಿಶ್ಚಯದಿಂದ ಅನಾತ್ಮ ಇದೆ. ಹೀಗೆ ಜೀವ ಅಜೀವದ ಭೇದಜ್ಞಾನವೇ ಮೋಕ್ಷದ ಕಾರಣವಿದೆಯೆಂದು ತಿಳಿದುಕೊಳ್ಳಬೇಕೆಂದು ಭಗವಂತರು ಹೇಳಿದ್ದಾರೆ. ಬಂಧದ ಸಂಬಂಧವು ವಿಭಾವದಿಂದ ಇದೆ ಮತ್ತು ಮೋಕ್ಷದ ಸಂಬಂಧವು ಸ್ವಭಾವದಿಂದ ಇದೆ. ಆದುದರಿಂದ ಬಂಧ ಮತ್ತು ಮೋಕ್ಷದ ಸ್ವರೂಪವನ್ನು ತಿಳಿದುಕೊಳ್ಳಬೇಕಾಗುವುದು. ಜ್ಞಾಯಕ ಆತ್ಮನು ಸ್ವ ಇದ್ದಾನೆ ಮತ್ತು ಸಂಸಾರ, ರಾಗ, ಬಂಧ ಇವು ಪರವಿವೆಯೆಂದು ಯಾವ ಭೇದಜ್ಞಾನವಾಗಿದೆಯೋ ಅದುವೇ ಮುಕ್ತಿಯ ಕಾರಣವಿದೆ ಉಳಿದವುಗಳಾವವೂ ಮುಕ್ತಿಯ ಕಾರಣವಿಲ್ಲ.

ಜೀವ ಅಜೀವದ ಭೇದವನ್ನು ತಿಳಿದುಕೊಳ್ಳಬೇಕೆಂದು ಈಗ ಹೇಳುತ್ತಾರೆ, -

**ಜೀವಾಜೀವಹ ಭೇಉ ಜೋ ಜಾಣಇ ತೇ ಜಾಣಿಯಉ**
**ಮೋಕ್ಖಹ ಕಾರಣ ಏಉ ಭಣಇ ಜೋಇ ಜೋಇಹಿಂ ಭಣಿಉ ||38||**

**ಜೀವ- ಅಜೀವದ ಭೇದವನು ತಿಳಿದವನೆಲ್ಲವ ತಿಳಿಯುವನು**
**ತವಸಿಗಳುಸುರುವರೆಲೆ ಯೋಗಿ ಮೋಕ್ಷದ ಕಾರಣವಿದೆಯೆಂದು ||38||**

**ಅರ್ಥ :-** ಎಲೈ ಯೋಗಿಯೇ ! ಯಾವನು ಜೀವ ಮತ್ತು ಅಜೀವದ ಭೇದವನ್ನು ತಿಳಿಯುತ್ತಾನೆ ಅವನೇ ಮೋಕ್ಷಮಾರ್ಗವನ್ನು ತಿಳಿಯುತ್ತಾನೆಂದು ಯೋಗಿವರರುಗಳು ಹೇಳಿ ಹೋಗಿದ್ದಾರೆ.

ಎಲೈ ಯೋಗಿಯೇ ! ಯಾವನು ಜಡ ಮತ್ತು ಚೈತನ್ಯ ಇವು ಎರಡೂ ಸರ್ವಥಾ ಭಿನ್ನವಿವೆಯೆಂದು ಭೇದ ವಿಜ್ಞಾನ ಮಾಡುವನು ಎಂದರೆ ತನ್ನನ್ನು ಶುದ್ಧ ಜ್ಞಾನ ಹಾಗೂ ಆನಂದಮಯ ಸ್ವರೂಪದಿಂದ ನೋಡುವನು ಮತ್ತು ರಾಗ-ದ್ವೇಷ-ಕರ್ಮ ಮೊದಲಾದವುಗಳನ್ನು ಅಜೀವ ಸ್ವರೂಪವಾಗಿ ನೋಡುವನು ಅವನಿಗೆ ಮೋಕ್ಷದ ಕಾರಣವು ಪ್ರಕಟವಾಗುವುದು. ಅಹಹ! ಜೀವ-ಅಜೀವದ ಭೇದವನ್ನು ತಿಳಿಯುವುದೆಂದರೆ ಜೀವನು ಶುದ್ಧ ಜ್ಞಾನ-ಆನಂದಾದಿಗಳ ಸ್ವರೂಪದಿಂದ ಇದ್ದರೆ ರಾಗ, ಕರ್ಮ, ಶರೀರ ಮೊದಲಾದವುಗಳೆಲ್ಲವು ಅಜೀವವಿವೆಯೆಂದು ತಿಳಿದುಕೊಳ್ಳುವುದಿದೆ.

ಜೀವ ಮತ್ತು ಅಜೀವದಲ್ಲಿ ಅನಾದಿಯಿಂದ ಸಂಬಂಧವಿದೆ, ಏಕೆಂದರೆ ಅವೆರಡರ ಸಂಬಂಧವಿಲ್ಲದಿದ್ದರೆ ಬಂಧವೇ ಆಗಲಾರದು. ಯಾವಾಗ ಎರಡರ ಸಂಬಂಧವು ಬಿಟ್ಟು ಹೋಗುವುದು ಆಗ ಮುಕ್ತಿಯಾಗುವುದು. ಆದುದರಿಂದ ಸರಿಯಾಗಿ ಇವೆರಡರ ಜ್ಞಾನ ಮಾಡಿಕೊಳ್ಳುವುದೇ ಮೋಕ್ಷದ ಕಾರಣವಿದೆ. ಜೀವ - ಅಜೀವದ ಭೇದಜ್ಞಾನ ಮಾಡಿಕೊಳ್ಳುವುದೇ ಮುಕ್ತಿಯ ಕಾರಣವಿದೆಯೆಂದು ಭಗವಂತರು ಹೇಳಿದ್ದಾರೆ.

'ಭೇದಜ್ಞಾನವೊಂದೇ ಜ್ಞಾನವಿದ್ದು ಉಳಿದೆಲ್ಲವು ಅಧಮ ಅಜ್ಞಾನವಿದೆ'. ಆತ್ಮ ಮತ್ತು ಜಡಗಳು ಭಿನ್ನವಿವೆಯಲ್ಲವೇ ! ಒಂದು ವೇಳೆ ಅವು ಭಿನ್ನವಿಲ್ಲದಿದ್ದರೆ ಅವುಗಳ ಸಂಬಂಧದಿಂದ ಬಂಧ ಮತ್ತು ಬಂಧದ ಅಭಾವರೂಪವಾದ ಮುಕ್ತಿಯು ಯಾವುದೇ ಪ್ರಕಾರದಿಂದ ಸಿದ್ಧವಾಗುವುದಿಲ್ಲ. ಆದುದರಿಂದ ಎರಡರ ಸ್ವರೂಪ, ಲಕ್ಷಣ, ಭಾವಗಳು ಭಿನ್ನವಿವೆಯೆಂದು ಸರಿಯಾಗಿ ತಿಳಿದುಕೊಂಡರೆ ಅವನಿಗೆ ಮೋಕ್ಷದ ಕಾರಣಗಳಾದಂಥ ಆತ್ಮ ಸ್ವರೂಪದ ಶ್ರದ್ಧೆ ಜ್ಞಾನ ಮತ್ತು ಶಾಂತಿಯು ಪ್ರಕಟವಾಗುವುದೆಂದು ಭಗವಂತರು ಹೇಳಿದ್ದಾರೆ.

ಆತ್ಮನು ರಾಗ ಮೊದಲಾದ ಪರದಿಂದ ಭಿನ್ನನಿದ್ದಾನೆ ಮತ್ತು ತನ್ನ ಶುದ್ಧ ಸ್ವಭಾವದಿಂದ ಅಭಿನ್ನ, ಅಭೇದ, ಏಕನಿದ್ದಾನೆಂದು ಭೇದಜ್ಞಾನ ಮಾಡಿದರೆ ಆಗ ಸ್ವಭಾವದ ಸನ್ಮುಖತೆ ಎಂದರೆ ಏಕಾಗ್ರತೆಯಾಗುವುದು ಮತ್ತು ಪರಸನ್ಮುಖತೆಯು ಬಿಟ್ಟು ಹೋಗುವುದು. ಈ ಪ್ರಕಾರ ಆತ್ಮಾನುಭವ ಮಾಡುವುದರಿಂದ ಮೋಕ್ಷವಾಗುವುದು.

ಆತ್ಮನು ಕೇವಲಜ್ಞಾನ ಸ್ವಭಾವಿಯಿದ್ದಾನೆಂದು ಈಗ ಹೇಳುತ್ತಾರೆ, -

**ಕೇವಲ-ಣಾಣ-ಸಹಾಉ ಸೋ ಅಪ್ಪಾ ಮುಣಿ ಜೀವ ತುಹು**

**ಜಇ ಚಾಹಹಿ ಸಿವ-ಲಾಹು ಭಣಇ ಜೋಇ ಜೋಇಹಿಂ ಭಣಿಉ ॥39॥**

**ಕೇವಲಜ್ಞಾನಮಯಾತ್ಮನನು ಜೀವನೆ ಇಹನೆಂದರಿಯುವುದು**

**ಶಿವಸುಖವನು ನೀ ಬಯಸುತಿರೆ ಯತಿವಚನವ ತಿಳಿ ಎಲೆ ಯೋಗಿ ॥39॥**

**ಅರ್ಥ :-** ಎಲೈ ಯೋಗಿಯೇ ! ನೀನು ಕೇವಲಜ್ಞಾನ ಸ್ವಭಾವಿಯಾದ ಯಾವ ಆತ್ಮನಿದ್ದಾನೆ ಅವನನ್ನೇ ಜೀವವೆಂದು ತಿಳಿ, ನಿನಗೆ ಮೋಕ್ಷದ ಅಪೇಕ್ಷೆಯಿದ್ದರೆ ಇದೇ ಉಪಾಯವಿದೆಯೆಂದು ಯೋಗಿವರರುಗಳು ಹೇಳಿದ್ದಾರೆ.

ಎಲೈ ಯೋಗಿಯೇ ! ನೀನು ಕೇವಲಜ್ಞಾನ ಸ್ವಭಾವಿಯಾದ ಆತ್ಮನನ್ನು ತಿಳಿದುಕೊಳ್ಳೆಂದು ಸರ್ವಜ್ಞ ಪರಮೇಶ್ವರರು ಅಥವಾ ಸಾಧು ಪರಮೇಷ್ಠಿಗಳು ಹೇಳಿದ್ದಾರೆ. ಕೇವಲಜ್ಞಾನ ಸ್ವಭಾವಿ ಎಂದರೆ ಕೇವಲಜ್ಞಾನ ಪರ್ಯಾಯದ ಮಾತು ಇಲ್ಲ, ಆದರೆ ಕೇವಲಜ್ಞಾನಸ್ವಭಾವವಿದೆ, ಅದರಲ್ಲಿ ಸರ್ವಜ್ಞ ಸ್ವಭಾವವು ಬಂದು ಬಿಟ್ಟಿತು. ಆತ್ಮನು ಪೂರ್ಣ ಜ್ಞಾನಸ್ವರೂಪನಿದ್ದಾನೆ ನೀನು ಅವನನ್ನು ತಿಳಿದುಕೊಳ್ಳು !

ಆತ್ಮನು ದೇಹದಿಂದ ಭಿನ್ನ ಏಕಾಕಿ ಕೇವಲಜ್ಞಾನದ ಮೂರ್ತಿಯಿದ್ದಾನೆಂದು ಅರಿವು ಮೂಡಿ ಬರಬೇಕಾಗುವುದು. ಇಲ್ಲಿ ದೇಹವೆಂದು ಹೇಳುವುದರಿಂದ ರಾಗಾದಿಗಳೆಲ್ಲವು ಪರದಲ್ಲಿ ಬಂದು ಬಿಡುತ್ತವೆ. ಸರ್ವಥಾ ಚೈತನ್ಯ ಸ್ವರೂಪನಾದ ಪ್ರಭು ಕೇವಲಜ್ಞಾನ ಸ್ವಭಾವವನ್ನು ಧಾರಣ ಮಾಡುವಂಥ ಜ್ಞಾನಸ್ವಭಾವಿಯಿದ್ದಾನೆ.

ಒಂದು ವೇಳೆ ಮೋಕ್ಷ ಲಾಭದ ಅಪೇಕ್ಷೆಯಿದ್ದರೆ ಎಂದರೆ ನಿರ್ಮಲ ಆನಂದದ ಪೂರ್ಣ ಪರ್ಯಾಯದ ಪ್ರಾಪ್ತಿಯ ಇಚ್ಛೆಯಿದ್ದರೆ - ಪೂರ್ಣ ಪವಿತ್ರತೆಯನ್ನು ಪ್ರಕಟಪಡಿಸಿಕೊಳ್ಳುವುದಿದ್ದರೆ ನೀನು ಆ ಕೇವಲಜ್ಞಾನ ಸ್ವಭಾವಿಯಾದ ಆತ್ಮನನ್ನು ತಿಳಿದುಕೊಳ್ಳು ! ಅವನ ಅನುಭವ ಮಾಡಿಕೊಳ್ಳು ! ಒಂದು ಜ್ಞಾನ ಸ್ವಭಾವದ ಅನುಭವ ಮಾಡಿಕೊಳ್ಳುವುದರಿಂದ ನಿನಗೆ ಮೋಕ್ಷ ದೊರಕುವುದು. 'ಆತ್ಮನನ್ನು ತಿಳಿದುಕೊಳ್ಳೆ'ಂದು ಹೇಳುವುದರಲ್ಲಿ ಪ್ರತೀತಿ, ಜ್ಞಾನ - ಸ್ಥಿರತೆ ಮತ್ತು ಆನಂದ ಮೊದಲಾದವುಗಳೆಲ್ಲವು ಬಂದು ಬಿಟ್ಟವು. ತಿಳಿದುಕೊಳ್ಳುವುದರಲ್ಲಿ ಸಮ್ಯಗ್ದರ್ಶನ ಜ್ಞಾನ- ಚಾರಿತ್ರರೂಪದ ಸಂಪೂರ್ಣ ಮೋಕ್ಷಮಾರ್ಗವು ಬಂದು ಬಿಡುವುದು.

ಆತ್ಮನನ್ನು ಕೇವಲಜ್ಞಾನಸ್ವಭಾವಿಯೆಂದು ಹೇಳುವುದರ ಉದ್ದೇಶವೇನೆಂದರೆ ಜ್ಞಾನ ಗುಣದಲ್ಲಿಯೇ ಅನ್ಯ ಅನಂತಗುಣಗಳ ಪ್ರತಿಭಾಸವಾಗುತ್ತದೆ ಎಂದರೆ ಜ್ಞಾನದಿಂದಲೇ ಅನ್ಯಗುಣಗಳ ಅರಿವು ಮೂಡಿ ಬರುತ್ತದೆ. ಆದರೆ ಅನ್ಯ ಗುಣಗಳ ಜ್ಞಾನದಿಂದ ಜ್ಞಾನದ ಜ್ಞಾನವಾಗುವಂತಿಲ್ಲ, ಅನ್ಯ ಗುಣಗಳು ಅಸ್ತಿತ್ವವಿಟ್ಟುಕೊಳ್ಳುತ್ತವೆ. ಆದರೆ ಅವು ಇತರ ಗುಣಗಳನ್ನು ತಿಳಿದುಕೊಳ್ಳುವುದಿಲ್ಲ ಮತ್ತು ತಾವು ತಮ್ಮನ್ನು ಕೂಡ ತಿಳಿದುಕೊಳ್ಳುವುದಿಲ್ಲ, ಜ್ಞಾನ ಗುಣವು ಮಾತ್ರ ತನ್ನನ್ನು ತಾನು ತಿಳಿದುಕೊಳ್ಳುತ್ತದೆ ಮತ್ತು ಇತರ ಸಮಸ್ತ ಗುಣಗಳ ಸ್ವರೂಪವನ್ನು ಕೂಡ ತಿಳಿದುಕೊಳ್ಳುತ್ತದೆ. ಆನಂದದ ಅನುಭವವಾಗುತ್ತದೆ, ಆದರೆ ಇದು ಆನಂದದ ಅನುಭವವಿದೆಯೆಂದು ತಿಳಿದುಕೊಳ್ಳುವುದಂತೂ ಜ್ಞಾನವೇ ಇದೆ. ಅದೇ ಪ್ರಕಾರ ಸಮ್ಯಗ್ದರ್ಶನವು ತನ್ನನ್ನು ತಾನು ತಿಳಿದುಕೊಳ್ಳುವುದಿಲ್ಲ, ಆದರೆ ಇದು ಸಮ್ಯಗ್ದರ್ಶನವಿದೆಯೆಂದು ಜ್ಞಾನವು ತಿಳಿದುಕೊಳ್ಳುತ್ತದೆ.

ಈ ಜ್ಞಾನದಲ್ಲಿ ಯಾವ ಕ್ರಿಯೆಯಾಯಿತು ? ಆತ್ಮನು ಜ್ಞಾನ ಸ್ವಭಾವಿಯಿದ್ದಾನೆಂದು ತಿಳಿದುಕೊಳ್ಳುವುದು ಅದು ಕ್ರಿಯೆಯಲ್ಲವೇನು ? ಆದರೆ ಹೀಗೆ ತಿಳಿದುಕೊಳ್ಳುವುದರಿಂದ ಬಾಹ್ಯದಲ್ಲಿ ಯಾವ ಅಂತರವು ಕಂಡು ಬರುವುದಿಲ್ಲವಲ್ಲ! ಆದರೆ ಆತ್ಮನು ಬಾಹ್ಯದಲ್ಲಿ ಇದ್ದರಲ್ಲವೇ ಬಾಹ್ಯದಲ್ಲಿನ ಯಾವುದಾದರೂ ಅಂತರವು ಕಂಡು ಬರುವುದು ! ಆತ್ಮನು

ಶರೀರ-ವಾಣಿಯಲ್ಲಿ ಕೂಡ ಇಲ್ಲವೆಂದ ಮೇಲೆ ಅದು ಬಾಹ್ಯದಲ್ಲಿ ಹೇಗೆ ಕಂಡು ಬರುವುದು ? ಜ್ಞಾನ ಸ್ವರೂಪಿಯಾದ ಆತ್ಮನು ಎಲ್ಲಿದ್ದಾನೆ ಅಲ್ಲಿ ನೋಡಿದರೆ ಅಂತರವಾದದ್ದು ಕಂಡು ಬರುವುದು. ಈತನ ಕ್ರಿಯೆಯಂತೂ ಈತನ ದಶೆಯಲ್ಲಿ ಗೋಚರಿಸುವುದು. ಬಾಹ್ಯದ ಕ್ರಿಯೆಯಿಂದ ಇದು ತಿಳಿದು ಬರುವಂತಿಲ್ಲ. ಜ್ಞಾನಿಯು ಬಾಹ್ಯದಲ್ಲಿ ಯುದ್ಧ ಮಾಡುತ್ತಿರುವುದು ಕಂಡು ಬರುತ್ತದೆ. ಆದರೆ ಅಂತರ್ಯದಲ್ಲಂತೂ ಅವನು ರಾಗದ ಸ್ವಾಮಿತ್ವವನ್ನು ಬಿಟ್ಟುಕೊಟ್ಟು ಆತ್ಮನ ಸ್ವಾಮಿತ್ವ ಧಾರಣ ಮಾಡಿ ಕುಳಿತುಕೊಂಡಿದ್ದಾನೆ. ಇದಕ್ಕೆ ವಿರುದ್ಧವಾಗಿ ಅಜ್ಞಾನಿಯು ಬಾಹ್ಯದಲ್ಲಿ ಸಮಸ್ತ ಸಂಯೋಗಗಳನ್ನು ಬಿಟ್ಟುಕೊಟ್ಟಿರುತ್ತಾನೆ, ಆದಾಗ್ಯೂ ಅಂತರ್ಯದಲ್ಲಿ ಎಲ್ಲವುಗಳ ಸ್ವಾಮಿತ್ವವನ್ನು ಸ್ವೀಕಾರ ಮಾಡಿ ಕುಳಿತುಕೊಂಡಿರುತ್ತಾನೆ. ಆದುದರಿಂದ ಅವನು ಸಮಸ್ತ ಸಂಯೋಗಗಳ ಮಧ್ಯದಲ್ಲಿಯೇ ಕುಳಿತುಕೊಂಡಿದ್ದಾನೆ, ಯಾವುದನ್ನೂ ಬಿಟ್ಟುಕೊಟ್ಟಿಲ್ಲ. ಅದಕ್ಕಾಗಿ ಎಲೈ ಜೀವನೇ ! ನೀನು ಒಂದು ವೇಳೆ ನಿಜವಾಗಿ ಶಿವಲಾಭವನ್ನು ಬಯಸುತ್ತಿದ್ದರೆ ಕೇವಲಜ್ಞಾನ ಸ್ವಭಾವಿಯಾದ ಆತ್ಮ-ತತ್ತ್ವವನ್ನು ಕೂಡಲೆ ತಿಳಿದುಕೊಳ್ಳು ! ವಿಲಂಬ ಮಾಡಬೇಡ !

ಜ್ಞಾನಿಗಳಿಗೆ ಎಲ್ಲಿ ನೋಡಿದರಲ್ಲಿ ಆತ್ಮನೇ ಕಂಡು ಬರುತ್ತಾನೆಂದು ಈಗ ಹೇಳುತ್ತಾರೆ, -

**ಕೋ ಸುಸಮಾಹಿ ಕರಉ ಕೋ ಅಂಚಉ ಛೋಪು-ಅಛೋಪು ಕರಿವಿ ಕೋ ವಂಚಉ**
**ಹಲ ಸಹಿ ಕಲಹು ಕೇಣ ಸಮಾಣಉ ಜಹಿಂ ಕಹಿಂ ಜೋವಉ ತಹಿಂ ಅಪ್ಪಾಣಉ ॥40॥**

**ಪೂಜೆ ಸಮಾಧಿ ವಂಚನೆ ಮೇಣ್ ಶತ್ರು-ಮಿತ್ರತೆಯು ಯಾರ ಜತೆ**
**ನಿಜದಿಂ ನೋಡಿದರೆಲ್ಲೆಡೆಗೆ ಬರಿ ಆತ್ಮನೆ ಆತ್ಮನು ತೋರುವನು ॥40॥**

**ಅರ್ಥ :-** ಯಾರು ಸಮಾಧಿ ಮಾಡುವುದು, ಯಾರ ಪೂಜೆ - ಅರ್ಚನೆ ಮಾಡುವುದು, ಯಾರ ಸ್ಪರ್ಶ - ಅಸ್ಪರ್ಶ ಮಾಡುವುದು, ಯಾರ ವಂಚನೆ ಮಾಡುವುದು, ಯಾರೊಡನೆ ಮಾಯಾಚಾರ ನಡೆಸುವುದು, ಯಾರೊಡನೆ ಶತ್ರು-ಮಿತ್ರತೆ ಸಾಧಿಸುವುದು ಎಲ್ಲಿ ನೋಡಿದರಲ್ಲಿ ಬರಿ ಆತ್ಮನೇ ಆತ್ಮನು ದೃಷ್ಟಿಗೋಚರನಾಗುತ್ತಿದ್ದಾನೆ.

ಜ್ಞಾನಿಗಳಿಗೆ ಎಲ್ಲ ಕಡೆಯಲ್ಲಿ ಆತ್ಮನೇ ಕಂಡು ಬರುತ್ತಾನೆ. ಶರೀರ ಮೊದಲಾದುವಂತೂ ಜಡವಿದ್ದು ರಾಗಾದಿಗಳು ವಿಕಾರವಿವೆ, ದೋಷವಿವೆ, ಅವೇನು ಆತ್ಮವಿಲ್ಲ. ಆತ್ಮನನ್ನು ತಿಳಿದುಕೊಳ್ಳುವಂಥವರಿಗೆ ಪ್ರತಿಯೊಂದು ಸ್ಥಳದಲ್ಲಿ ಆತ್ಮನೇ ಭಾಸವಾಗುತ್ತಾನೆಂದು ಈ ಗಾಥೆಯಲ್ಲಿ ಹೇಳುತ್ತಾರೆ.

ನಾನು ಆನಂದ ಸ್ವರೂಪನಾದ ಭಗವಾನ ಆತ್ಮನೇ ಇದ್ದೇನೆಂದು ಭಾಸವಾದವನಿಗೆ ಈಗ ಏನು ಮಾಡುವುದು ಬಾಕಿ ಉಳಿದಿದೆ ? ಈಗ ಯಾರು ಸಮಾಧಿ ಮಾಡುವುದು ? ಏಕೆಂದರೆ ಯಾವಾಗ ಆತ್ಮನನ್ನು ತಿಳಿದುಕೊಳ್ಳುತ್ತದೆ ಆಗ ಅವನಲ್ಲಿ ಸ್ಥಿರವಾಗೇ ಆಗುತ್ತದೆ. ನಾನು ಸ್ವಯಂ ಪರಮಾತ್ಮ ಸ್ವರೂಪದ ಧಾರಕನಿದ್ದೇನೆಂದು ಭಾಸವಾದ ನಂತರ ಈಗ ಯಾರ ಪೂಜೆ ಮಾಡುವುದು ? ಇವರಂತೂ ತಮ್ಮ ಪೂಜೆ ಮಾಡುತ್ತಾರೆ. ಯಾವಾಗ ಶುಭ ಭಾವ ಬರುತ್ತವೆ ಆಗ ಭಗವಂತರ ಪೂಜೆ ಮಾಡುತ್ತಾರೆ. ಯಾವಾಗ ಆತ್ಮನೇ ಶುಭ ಭಾವಗಳಿಂದ ಭಿನ್ನ ಚೈತನ್ಯ ಸ್ವರೂಪವಾಗಿ ಭಾಸವಾಗುವನು,. ಅವನಲ್ಲಿ ಸ್ಥಿರಗೊಳ್ಳುವನು ಆಗ ತಾನೇ ತನ್ನ ಮರ್ಯಾದೆ ಮಾಡುವನು - ಗೌರವ ಮಾಡುವನು. ಅದರಿಂದಾಗಿ ಅವನಿಗೆ ಇತರರ ಪೂಜೆ ಮಾಡುವುದು ಉಳಿದೇ ಇಲ್ಲ. ನಾನೇ ಸತ್ - ಚಿದಾನಂದ ಪೂರ್ಣ ಆತ್ಮತತ್ತ್ವನಿದ್ದೇನೆಂದು ಭಾಸವಾದ ಮೇಲೆ ಸ್ಪೃಶ್ಯ-ಅಸ್ಪೃಶ್ಯ ಭಾವನೆಯು ಉತ್ಪನ್ನವಾಗುವುದಿಲ್ಲ.

ತನ್ನನ್ನೇ ಜ್ಞಾನವಂತನೆಂದು ತಿಳಿದುಕೊಂಡರೆ ಅನ್ಯರ ಆತ್ಮರುಗಳನ್ನು ಕೂಡ ತನ್ನ ಸಮಾನ ಜ್ಞಾನವುಳ್ಳ ಭಗವಾನ ಆತ್ಮನೆಂದು ತಿಳಿಯುತ್ತಾನೆ, ಆಗ ಯಾರನ್ನು ಮೋಸಗೊಳಿಸುವುದು ? ಯಾರ ಜತೆಯಲ್ಲಿ ಮಾಯಾಚಾರ ಮಾಡುವುದು ? ಎಲ್ಲರನ್ನು ಭಗವಾನ ಸ್ವರೂಪವಾಗಿ ನೋಡುತ್ತಿರುವಾಗ ಯಾರೊಡನೆ ಮಾಯಾಚಾರ ಮಾಡುವುದು ?

ಎಲ್ಲಿಯವರೆಗೆ ಆತ್ಮನನ್ನು ತಿಳಿದುಕೊಳ್ಳುತ್ತಿರಲಿಲ್ಲ ಆಗ ಮಾತ್ರ ಮಾಯಾಚಾರ ಮಾಡಿಯಾಯಿತು. ಈಗ ಯಾರ ಜತೆ ಮಾಯಾಚಾರ ಮಾಡುವುದು ? ಏಕೆಂದರೆ ಮಾಯಾಚಾರ ಮಾಡುವುದು ಅದು ಆತ್ಮನ ಸ್ವರೂಪವಲ್ಲ.

ಯಾರ ಜತೆಯಲ್ಲಿ ಶತ್ರುತನ ಮತ್ತು ಮಿತ್ರತನ ಮಾಡುವುದು ? ಎಲ್ಲರೂ ಪರಮಾತ್ಮ ಸ್ವರೂಪರಿದ್ದಾರೆಂದ ಮೇಲೆ ಯಾರೊಡನೆ ಮೈತ್ರಿ ಮಾಡುವುದು, ಯಾರ ಭಜನೆ ಮಾಡುವುದೆಂದು ತಿಳಿದುಕೊಳ್ಳುವಂಥವನು ಸ್ವಯಂ ಅತೀಂದ್ರಿಯ ಆನಂದದ ಮಾಲೆಯನ್ನು ತಿರುಗಿಸುತ್ತಾನೆ ಎಂದರೆ ಸ್ವಯಂ ಜ್ಞಾನಾನಂದಮಯನಾಗಿ ಹೋಗುತ್ತಾನೆ. ಆಗ ಮತ್ತೆ ಯಾರ ಜಪ ಮಾಡುವುದು ? ಮತ್ತು ತನ್ನನ್ನೇ ಶಾಂತಸ್ವಭಾವಿಯೆಂದು ತಿಳಿದುಕೊಳ್ಳುವಲ್ಲಿ ಇತರರ ಆತ್ಮನನ್ನು ಕೂಡ ಕ್ಲೇಶರಹಿತ ಶಾಂತಸ್ವಭಾವಿಯೆಂದೇ ತಿಳಿದುಕೊಳ್ಳುವನು. ಆಗ ಅಲ್ಲಿ ಯಾರ ಜತೆಯಲ್ಲಿ ಕ್ಲೇಶ ಮಾಡಿ ಶತ್ರುತ್ವವನ್ನು ಕಟ್ಟಿಕೊಳ್ಳುವುದು.

ಅಹಹ ! ಇವನಿಗಂತೂ ಎಲ್ಲಿ ನೋಡಿದರಲ್ಲಿ ಭಗವಾನ ಆತ್ಮನೇ ಕಂಡು ಬರುತ್ತಾನೆ. ಆದರೆ ಎಲ್ಲರು ಸೇರಿ ಒಬ್ಬ ಆತ್ಮನಿದ್ದಾನೆಂದು ತಿಳಿದುಕೊಳ್ಳುವುದಿಲ್ಲ. ತನ್ನ ಆತ್ಮನನ್ನು ಯಾವ ಪ್ರಕಾರ ರಾಗಾದಿಗಳಿಂದ ರಹಿತವಾಗಿ ನೋಡುತ್ತಾನೆ. ಅದೇ ಪ್ರಕಾರ ಅನ್ಯ ಆತ್ಮರುಗಳನ್ನು ಕೂಡ ನೋಡುತ್ತಾನೆ. ಅಹಹ ! ಮೊದಲು ಜೀವ - ಅಜೀವದ ಭೇದ ಮಾಡುವುದಕ್ಕೆ ಹೇಳಿದೆ ; ಅನಂತರ ಕೇವಲಜ್ಞಾನ ಸ್ವಭಾವಿಯಾದ ಆತ್ಮನನ್ನು ಹೇಳಿದೆ ಮತ್ತು ಈಗ ತನ್ನ ಸಮಾನವಾಗಿಯೇ ಸಮಸ್ತ ಆತ್ಮರುಗಳನ್ನು ತಿಳಿಯುತ್ತಾನೆಂದು ಹೇಳಿದೆ. ಜ್ಞಾನಿಗಳು ಯಾವ ಪ್ರಕಾರದ ದೃಷ್ಟಿಯಿಂದ ತಮ್ಮನ್ನು ನೋಡುತ್ತಾರೆ ಅದೇ ಪ್ರಕಾರದ ದೃಷ್ಟಿಯಿಂದ ಅನ್ಯ ಆತ್ಮರುಗಳನ್ನು ನೋಡುತ್ತಾರೆ. ಅನ್ಯ ಆತ್ಮರುಗಳನ್ನು ಕೂಡ ಶರೀರ, ರಾಗ ಮೊದಲಾದವುಗಳಿಂದ ರಹಿತವಾಗಿಯೇ ತಿಳಿಯುತ್ತಾರೆ. ಅಯ್ಯಾ ! ಪರಮಾಣು ಮೊದಲಾದುವನ್ನು ನೋಡಿದರೂ ಕೂಡ ಅಲ್ಲಿ ಜ್ಞಾನವೇ ಭಾಸವಾಗುತ್ತದೆ. ನಾನು ತಿಳಿಯುವಂಥವನಿದ್ದೇನೆ. ರಾಗಾದಿಗಳನ್ನು ತಿಳಿಯುತ್ತಿದ್ದರು ಕೂಡ ನಾನು ತಿಳಿದುಕೊಳ್ಳುವಂಥ ಜ್ಞಾನವೇ ಇದ್ದೇನೆಂದು ಭಾಸವಾಗುತ್ತದೆ. ಆದುದರಿಂದ ಎಲ್ಲ ಕಡೆಯಲ್ಲಿ ಆತ್ಮನೇ ತಿಳಿಯುವುದರಲ್ಲಿ ಬರುತ್ತಾನೆ. ಅನ್ಯವನ್ನು ನೋಡುವ ಸಮಯದಲ್ಲಿ ಕೂಡ ತನ್ನ ಜ್ಞಾನವೇ ತಿಳಿಯುವುದರಲ್ಲಿ ಬರುತ್ತದೆ. ಎಂದರೆ ತನ್ನ ಜ್ಞಾನದ ಪರ್ಯಾಯವೇ ಹೇಗೆ ಜ್ಞೇಯವಿದೆ ಹಾಗೆ ಅದರ ಆಕಾರವಾಗಿ ಪರಿಣಮಿತವಾಗುತ್ತದೆ ಮತ್ತು ಅದನ್ನು ಆತ್ಮನು ತಿಳಿಯುತ್ತಾನೆ. ಈ ಪ್ರಕಾರದ ಧರ್ಮದ ಸ್ವರೂಪವನ್ನು ಜೀವನು ಮೊದಲೆಂದೂ ಆಲಿಸಿಲ್ಲ. ಅನಾದಿಯಿಂದ ಎಂಭತ್ತಾನ್ಲುಕ್ಕ ಲಕ್ಷ ಯೋನಿಗಳಲ್ಲಿ ಭ್ರಮಣ ಮಾಡುತ್ತ ಪುಡಿ - ಪುಡಿಯಾಗಿ ಹೋಗಿದ್ದಾನೆ. ಆದಾಗ್ಯೂ ಜ್ಞಾನವು ಆತ್ಮನೆಂಬುದನ್ನು ತಿಳಿಯಲಿಲ್ಲ. ಪ್ರತಿಯಾಗಿ ಆತ್ಮನನ್ನು ಅನಾತ್ಮನೆಂದು ಮನ್ನಿಸಿದನು ಮತ್ತು ಅನಾತ್ಮನನ್ನು ಆತ್ಮನೆಂದು ಮನ್ನಿಸಿದನು.

ಅನ್ಯರ ದೋಷದ ಜ್ಞಾನವಾಯಿತು; ಆದರೆ ಅಲ್ಲಿ ಕೂಡ ಜ್ಞಾನವೇ ಆಯಿತಲ್ಲವೇ ! ಆ ಜ್ಞಾನವು ತನ್ನಲ್ಲಿ ಆಗಿರುವುದರಿಂದ ತನ್ನದೇ ಜ್ಞಾನವಾಯಿತು; ಆದರೆ ದೋಷದ ಜ್ಞಾನವಾಗಲಿಲ್ಲ. ಆದುದರಿಂದ ಎಲ್ಲಿದೆ ಅಲ್ಲಲ್ಲಿ ಎಲ್ಲವು ತನ್ನದೇ ಜ್ಞಾನವಾಗಿದೆ; ತನ್ನ ಜ್ಞಾನವೇ ತಿಳಿಯುವುದರಲ್ಲಿ ಬರುತ್ತದೆ.

'ನಾನು ಜ್ಞಾನದ ಮೂರ್ತಿಯಿದ್ದೇನೆಂ'ದು ಅಂತರ್ಯದಲ್ಲಿ ಅರಿವು ಮೂಡುತ್ತಿರುವಂತೆಯೇ ಎಲ್ಲೆಡೆಗೆ ಆ ಜ್ಞಾನವೇ ಎಂದರೆ ಆತ್ಮನೇ ಗೋಚರಿಸುತ್ತಾನೆ. ಯಾವ ಪ್ರಕಾರ ಗದ್ದೆಯಲ್ಲಿ ಭತ್ತ ಬಿತ್ತಿದ್ದರೆ ಒಕ್ಕಲಿಗನ ದೃಷ್ಟಿಯು ಅದು ಎಷ್ಟು ಬೆಳೆಯಿತೆಂದು ಭತ್ತದ ಮೇಲೆಯೇ ಇರುತ್ತದೆ, ಆದರೆ ಆ ಭತ್ತದ ಪೈರು ಎಷ್ಟು ಎತ್ತರ ಬಂದಿತೆಂಬುದರ ಮೇಲೆ ಇರುವುದಿಲ್ಲ. ಅದೇ ಪ್ರಕಾರ ಚಿನ್ನದಲ್ಲಿ ರತ್ನವನ್ನು ಕಟ್ಟಿದ್ದರೆ ಮತ್ತು ಅದನ್ನು ತೆಗೆದುಕೊಂಡು ರತ್ನ ಪರೀಕ್ಷಕನ ಹತ್ತಿರ ಹೋದರೆ ಅವನ ದೃಷ್ಟಿಯು ರತ್ನದ ಮೇಲೆ ಇರುತ್ತದೆಯೇ ವಿನಹ ಚಿನ್ನದ ಮೇಲೆ ಇರುವುದಿಲ್ಲ. ಏಕೆಂದರೆ ಅವನಿಗೆ ರತ್ನದಿಂದಲೇ ಪ್ರಯೋಜನವಿದೆ. ಅಕ್ಕಸಾಲಿಗನ ಹತ್ತಿರ ಹೋದರೆ ಅವನದೃಷ್ಟಿಯು ಚಿನ್ನದಮೇಲೆಯೇ ಇರುತ್ತದೆ.

ಅದೇ ಪ್ರಕಾರ ಯಾರಿಗೆ ಆತ್ಮನ ಶ್ರದ್ಧೆ-ಜ್ಞಾನವಾಗಿದೆ ಅವನಿಗೆ ಎಲ್ಲಿ ನೋಡಿದರೂ ಅಲ್ಲಿ ಆತ್ಮನೇ ದೃಷ್ಟಿಗೋಚರನಾಗುತ್ತಾನೆ. "ನಾನಂತೂ ಕೇವಲ ತಿಳಿದುಕೊಳ್ಳುವಂಥವನಿದ್ದೇನೆ-ನೋಡುವಂಥವನಿದ್ದೇನೆ, ನಾನು ಬೇರೆ ಯಾರೂ ಇಲ್ಲ."

ಆತ್ಮನ ಜ್ಞಾನದಿಂದ ರಹಿತನಾದ ಜೀವನು ಕುರ್ತಿರ್ಥಗಳಲ್ಲಿ ತಿರುಗುತ್ತಾನೆಂದು ಈಗ ಹೇಳುತ್ತಾರೆ, -

**ತಾಮ ಕುತಿತ್ಥಇ ಪರಿಭಮಇ ಧುತ್ತಿಮ ತಾಮ ಕರೇಇ**

**ಗುರುಹು ಪಸಾಏ ಜಾಮ ಣವಿ ಅಪ್ಪಾ-ದೇಉ ಮುಣೇಇ ॥41॥**

**ಗುರುಕೃಪೆಯಿಂದಾತ್ಮದೇವನನು ತಿಳಿಯದವರೆಗೆ ಕುತೀರ್ಥದಲಿ**

**ತಿರುಗುವನಲ್ಲದೆ ಅದುವರೆಗೆ ಧೂರ್ತತೆಯನು ಸಹ ಬಿಡಲಾರ ॥41॥**

**ಅರ್ಥ :-** ಗುರುಗಳ ಪ್ರಸಾದದಿಂದ ಎಲ್ಲಿಯವರೆಗೆ ಓರ್ವ ತನ್ನ ಆತ್ಮರೂಪದ ದೇವನನ್ನು ತಿಳಿದುಕೊಳ್ಳುವುದಿಲ್ಲ ಅಲ್ಲಿಯವರೆಗೆ ಮಿಥ್ಯಾ ತೀರ್ಥಗಳಲ್ಲಿ ತಿರುಗುತ್ತಾನೆ ಮತ್ತು ಅಲ್ಲಿಯವರೆಗೆ ಧೂರ್ತತೆಯನ್ನು ಮಾಡುತ್ತಾನೆ.

ದೇಹ ದೇವಾಲಯದಲ್ಲಿ ವಿರಾಜಮಾನನಿರುವ ತನ್ನ ಆತ್ಮನನ್ನು-ಸಚ್ಚಿದಾನಂದ ಸ್ವರೂಪನಾದ ತನ್ನ ದೇವನನ್ನು ಗುರುಗಳ ಅನುಗ್ರಹದಿಂದ ಎಲ್ಲಿಯವರೆಗೆ ತಿಳಿದುಕೊಳ್ಳುವುದಿಲ್ಲ ಅಲ್ಲಿಯವರೆಗೆ ಕುತೀರ್ಥಗಳಲ್ಲಿ ಭ್ರಮಿಸುತ್ತಿರುತ್ತಾನೆ, ಸುತ್ತಾಡುತ್ತಿರುತ್ತಾನೆ.

ಪವಿತ್ರವಾದ ನದಿಗಳಲ್ಲಿ ಸ್ನಾನ ಮಾಡಿದರೆ ಕಲ್ಯಾಣವಾಗುತ್ತದೆಯೆಂದು ಹೇಳುತ್ತಾರೆ. ಆದರೆ ಸ್ವಲ್ಪ ಕೂಡ ಕಲ್ಯಾಣವಾಗುವುದಿಲ್ಲ, ಅಲ್ಲಿ ಮೀನುಗಳು ನಿರಂತರ ಸ್ನಾನ ಮಾಡುತ್ತಿರುತ್ತವೆ, ಅಲ್ಲಿಯೇ ಮುಳುಗೇಳುತ್ತಿರುತ್ತವೆಂದ ಮೇಲೆ ಅವುಗಳ ಕಲ್ಯಾಣವಾಗಿ ಹೋಗುವುದೇನು ? ಕುತೀರ್ಥಗಳಲ್ಲಿ ಲಾಭ ಮನ್ನಿಸುವುದಂತೂ ಲೋಕ ಮೂಢತೆಯಿದೆ. ವಿಷಯಗಳ ಪ್ರಾಪ್ತಿಯ ಸಲುವಾಗಿ ಜೀವನು ಮಿಥ್ಯಾದೇವ, ಮಿಥ್ಯಾಶಾಸ್ತ್ರ ಮತ್ತು ಮಿಥ್ಯಾಗುರುಗಳ ಪೂಜೆ-ಭಕ್ತಿ-ಸ್ವಾಧ್ಯಾಯ-ಸೇವೆಯನ್ನು ಬಹಳಷ್ಟು ಮಾಡುತ್ತಾನೆ, ಆದರೆ ಅದಂತೂ ಮೂಢತೆಯಿದೆ. ತನ್ನ ಶುದ್ಧಾತ್ಮನ ಅನುಭವ ಮಾಡುವುದು ಅದು ನಿಜವಾಗಿ ದೇವಪೂಜೆಯಿದೆ, ಸಮ್ಯಗ್ದರ್ಶನವಿದೆ. ಇದನ್ನು ಬಿಟ್ಟು ಕುತೀರ್ಥಗಳಲ್ಲಿ ತಿರುಗುವುದರಿಂದ ಯಾವ ಲಾಭವಿಲ್ಲ, ಸೋರೆ ಬುರುಡೆಯ ಉದಾಹರಣೆ ಬರುತ್ತದೆಯಲ್ಲವೇ ! ಕಹಿಯಾದ ಸೋರೆ ಬುರುಡೆಯನ್ನು ತೀರ್ಥಗಳಲ್ಲಿ ಬೇಕಾದಷ್ಟು ಸ್ನಾನ ಮಾಡಿಸಿದರೂ ಕೂಡ ಅದರ ಕಹಿತನವಂತೂ ಹೋಗುವುದೇ ಇಲ್ಲ, ಎಂದ ಮೇಲೆ ತೀರ್ಥಗಳಲ್ಲಿ ಸ್ನಾನ ಮಾಡುವುದರಿಂದ ನಿನ್ನ ಕಹಿತನ ಎಂದರೆ ವಿಪರೀತತೆಯು ಹೊರಟು ಹೋಗುವುದೇನು ? ಅಹಹ ! ಭ್ರಾಂತಿರೂಪದ ವಿಷವು ಇಳಿಯದಿದ್ದರೆ ಎಲ್ಲಿಯ ತೀರ್ಥವೇನು ಮಾಡುವುದು ?

ನಿಶ್ಚಯದಿಂದ ನಿಜ ಶರೀರವೇ ತೀರ್ಥ ಮತ್ತು ಮಂದಿರವಿದೆಯೆಂದು ಈಗ ಹೇಳುತ್ತಾರೆ, -

**ತಿತ್ಥಹಿಂ ದೇವಲಿ ದೇಉ ಣವಿ ಇಮ ಸುಇಕೇವಲಿ ವುತ್ತು**

**ದೇಹಾ-ದೇವಲಿ ದೇಉ ಜಿಣು ಏಹಉ ಜಾಣಿ ಣಿರುತ್ತು ॥42॥**

**ಶ್ರುತಕೇವಲಿಯ ವಚನವಿದೆ ದೇವನು ಮಂದಿರ ತೀರ್ಥದಿ ಇಲ್ಲ**

**ಇತಿ ನಿಶ್ಚಯದಿ ತಿಳಿ ನೀನು ತನುಮಂದಿರದಿ ಜಿನದೇವನಿಹ ॥42॥**

**ಅರ್ಥ :-** ತೀರ್ಥಕ್ಷೇತ್ರಗಳಲ್ಲಿ ಮತ್ತು ದೇವ ಮಂದಿರಗಳಲ್ಲಿ ಪರಮಾತ್ಮನಾದ ದೇವನಿಲ್ಲ, ಆದರೆ ನಿಶ್ಚಯದಿಂದ ಈ ಶರೀರರೂಪದ ದೇವಾಲಯದಲ್ಲಿ ಜಿನದೇವನಿದ್ದಾನೆಂದು ಶ್ರೀ ಶ್ರುತಕೇವಲಿಗಳು ಹೇಳಿರುವುದನ್ನು ತಿಳಿದುಕೊಳ್ಳು!

ನಿಶ್ಚಯದಿಂದ ಬಾಹ್ಯದೇವಾಲಯದಲ್ಲಿ ಪರಮಾತ್ಮನಿಲ್ಲ, ಆದರೆ ಶರೀರರೂಪದ ನಿನ್ನ ದೇಹ-ದೇವಾಲಯದಲ್ಲಿ ಪರಮಾತ್ಮನು ಎಂದರೆ ನಿನ್ನ ಆತ್ಮದೇವನು ವಿರಾಜಮಾನನಿದ್ದಾನೆಂದು ಭಗವಂತರು ಮತ್ತು ಶ್ರುತಕೇವಲಿಗಳು ಹೇಳಿದ್ದಾರೆ. ಅವನನ್ನು ತಿಳಿದುಕೊಳ್ಳು, ಅವನ ಶ್ರದ್ಧೆ ಮಾಡು, ಇದುವೇ ದೇವ ಪೂಜೆಯಿದೆ. ಮಂದಿರದಲ್ಲಂತೂ ಸ್ಥಾಪನಾ ಭಗವಂತನಿದ್ದಾನೆ, ಅಲ್ಲಿ ನಿಜವಾದ ಭಗವಂತನಿಲ್ಲ. ಏಕೆಂದರೆ ನಿಜವಾದ ಭಗವಂತರಂತೂ ಸಮವಸರಣದಲ್ಲಿದ್ದಾರೆ. ಅಲ್ಲಿಗೆ ಹೋದರು ಕೂಡ ನಿನಗೆ ಭಗವಂತರ ಶರೀರವೇ ಕಂಡು ಬರುವುದು, ಆದರೆ ಭಗವಂತರ ಆತ್ಮನು ಕಂಡು ಬರಲಾರನು. ನೀನು ಯಾವಾಗ ನಿನ್ನ ಆತ್ಮನನ್ನು ನೋಡುವೆಯೋ ಆಗಲೇ ಭಗವಾನ ಆತ್ಮನು ಕಂಡು ಬರುವನು. ರಾಗ ತುಂಬಿದ ಕಣ್ಣುಗಳನ್ನು ಮುಚ್ಚಿ, ಪರಪದಾರ್ಥಗಳನ್ನು ನೋಡುತ್ತಿರುವ ದೃಷ್ಟಿಯನ್ನು ನಿಲ್ಲಿಸಿದಾಗಲೇ ನಿಜವನ್ನು ನೋಡಬಹುದಾಗಿದೆ. ತಿಳಿದುಕೊಳ್ಳಬಹುದಾಗಿದೆ. ಆಗಲೇ ಪರಮಾತ್ಮನು ಹೀಗಿರುತ್ತಾನೆಂದು ನಿಜವಾದ ಭಗವಂತನು ನಿನಗೆ ತಿಳಿದು ಬರಬಹುದಾಗಿದೆ.

ತಮ್ಮ ಆತ್ಮನನ್ನು ತಿಳಿದುಕೊಳ್ಳುವುದೇ ಭಗವಂತರ ನಿಶ್ಚಯ ಭಕ್ತಿಯಿದೆ ಮತ್ತು ದೇವಾಲಯದಲ್ಲಿ ವಿರಾಜಮಾನವಿರುವ ಭಗವಂತರ ಭಕ್ತಿಯು ಅದು ವ್ಯವಹಾರ ಭಕ್ತಿಯಿದೆ.

ವಾಸ್ತವಿಕವಾಗಿ ಈ ದೇಹವೇ ತೀರ್ಥವಿದೆ ಮತ್ತು ಮಂದಿರವಿದೆ; ಏಕೆಂದರೆ ಆತ್ಮನು ಇದರಲ್ಲಿಯೇ ವಾಸಿಸುತ್ತಾನೆ. ಬಾಹ್ಯದಲ್ಲಿರುವ ಮಂದಿರದಲ್ಲಿ ಆತ್ಮನು ವಾಸಿಸುವುದಿಲ್ಲ, ಪ್ರತಿಮೆಯಲ್ಲಿ ಆತ್ಮನಿಲ್ಲ, ಅದೇ ಪ್ರಕಾರ ಪ್ರತ್ಯಕ್ಷ ಭಗವಂತರಲ್ಲಿ ಕೂಡ ನಿನ್ನ ಆತ್ಮನಿಲ್ಲ, ನಿನ್ನ ಆತ್ಮನನ್ನು ನೋಡುವುದಿದ್ದರೆ - ತಿಳಿದುಕೊಳ್ಳುವುದಿದ್ದರೆ ಈ ದೇಹರೂಪದ ತೀರ್ಥದಲ್ಲಿಯೇ ಎಂದರೆ ಈ ದೇಹರೂಪದ ಮಂದಿರದಲ್ಲಿಯೇ ಗೋಚರಿಸುವನು. ತನ್ನ ಆತ್ಮನು ಎಲ್ಲಿ ಯಾವ ಭಗವಂತನ ಹತ್ತಿರದಲ್ಲಿ ಯಾವ ಬಾಹ್ಯ ತೀರ್ಥದಲ್ಲಿ ಇಲ್ಲ.

**ಪ್ರಶ್ನೆ :-** ಭಗವಂತರ ಹತ್ತಿರ ಈ ಆತ್ಮನ ಮಾದರಿಯಾದರೂ ಇದೆಯಲ್ಲವೇ ?

**ಉತ್ತರ :-** ತಮ್ಮ ಆತ್ಮನು ಎಲ್ಲಿರುತ್ತಾನೋ ಅಲ್ಲಿಯೇ ಅವನ ಮಾದರಿಯಿರುತ್ತದೆ. ಭಗವಂತರ ಹತ್ತಿರ ಭಗವಂತರ ಆತ್ಮನ ಮಾದರಿ (ನಮೂನೆ) ಇರುತ್ತದೆ ; ನಿನ್ನ ಆತ್ಮನ ನಮೂನೆಯಿರುವುದಿಲ್ಲ.

ನೋಡಿರಿ ! ಇದು ವಾಸ್ತವಿಕ ತತ್ತ್ವವಿದೆ. ಭಗವಂತರ ಪ್ರತಿಮೆಯಲ್ಲಿ ಭಾವ-ನಿಕ್ಷೇಪವಿಲ್ಲ, ಅಥಂತೂ ಸ್ಥಾಪನಾ ನಿಕ್ಷೇಪವಿದೆ. ಶರೀರ ರೂಪದ ತೀರ್ಥದಲ್ಲಿಯೇ ಭಗವಂತನು ವಿರಾಜಮಾನನಿದ್ದಾನೆ. ನಮ್ಮ ಮಂಧಿರ ನಮ್ಮ ಮಂದಿರವೆಂದು ಹೇಳುತ್ತೇವೆ, ಆದರೆ ಆ ಮಂದಿರದಲ್ಲಿ ನಮ್ಮ ಭಗವಂತನೆಲ್ಲಿದ್ದಾನೆ ? ನಮ್ಮ ಭಗವಂತನಂತೂ ನಮ್ಮಲ್ಲಿಯೇ ಇದ್ದಾನೆಂದು ಶ್ರುತಕೇವಲಿಗಳು ಹೇಳುತ್ತಾರೆ. ಹೀಗೆ ಹೇಳಿ ನೀನು ನಿನ್ನಲ್ಲಿ ನೋಡುವುದರಿಂದ ನಿನಗೆ ನಿನ್ನ ಆತ್ಮನು ದೊರಕುವನು ಮಂದಿರದಲ್ಲಿ ವಿರಾಜಮಾನನಾದ ಭಗವಂತನನ್ನು ನೋಡುವುದರಿಂದ ನಿನಗೆ ನಿನ್ನ ಆತ್ಮನು ದೊರಕುವುದಿಲ್ಲವೆಂಬುದನ್ನು ಅವರಿಗೆ ಸಿದ್ಧ ಮಾಡುವುದಿದೆ. ಮಂದಿರದಲ್ಲಂತೂ ಭಗವಂತರು ಹೇಗೆ ಇರುತ್ತಾರೆ ಮತ್ತು ಹೇಗೆ ಇದ್ದರೆಂಬುದರ ಪ್ರತೀಕವಾಗಿ ಪ್ರತಿಬಿಂಬವಿದೆ. ಆ ಪ್ರತಿಬಿಂಬವನ್ನು ನೋಡುವುದರಿಂದ ಪರಮಾತ್ಮನ ಸ್ಮರಣೆಯಾಗುತ್ತದೆ, ಆದರೆ ಅದರಲ್ಲಿ ತಮ್ಮ ಆತ್ಮನು ಗೋಚರಿಸುವುದಿಲ್ಲ. ಪ್ರತ್ಯಕ್ಷ ಭಗವಂತರನ್ನು ನೋಡುವುದರಿಂದಲೂ ತಮ್ಮ ಭಗವಂತನು ಕಂಡು ಬರುವುದಿಲ್ಲ. ಇದು ಅನುಭವ ಸಿದ್ಧವಾದ ಮಾತು ಇದೆ.

ಅಯ್ಯಾ ! ಶಾಸ್ತ್ರದಿಂದ ಸ್ವಲ್ಪಕೂಡ ಜ್ಞಾನವಾಗುವುದಿಲ್ಲ, ಪರ ಸಂಬಂಧದ ಜ್ಞಾನವಾಗುತ್ತದೆ ಅದು ಕೂಡ ತಮ್ಮಿಂದಲೇ ಆಗುತ್ತದೆ, ತಮ್ಮ ಉಪಾದಾನದಿಂದಲೇ ಆಗುತ್ತದೆ ಅದೇನು ನಿಮಿತ್ತದಿಂದ ಆಗುವುದಿಲ್ಲ, ಭಗವಂತರು ಹೀಗಿದ್ದರೆಂದು ಸ್ಮರಣೆಯಾಗುವುದರಲ್ಲಿ ಕೂಡ ಉಪಾದಾನವಂತೂ ತಮ್ಮದೇ ಇದೆ.

ಭಗವಂತನು ಗುಹೆಯಲ್ಲಿ ಇಲ್ಲ, ಪರ್ವತ ಶಿಖರದ ಮೇಲೆ ಇಲ್ಲ, ನದೀ ತೀರದಲ್ಲಿ ಇಲ್ಲ, ಮಂದಿರದಲ್ಲಿ ಇಲ್ಲ, ಭಗವಂತನು ಬಾಹ್ಯದಲ್ಲಿ ಎಲ್ಲಿಯೂ ಇಲ್ಲ, ಹಾಗಾದರೆ ಮಂದಿರವನ್ನು ವಾಸ್ತವಿಕ ಮಂದಿರವೆಂದು ಹೇಗೆ